## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಪುಟ್ಟಣ್ಣ (ಬೆಂಗಳೂರು ಶಿಕ್ಷಕರ ಕ್ಷೇತ್ರ) ಇವರು ನಿಯಮ 330ರ ಮೇರೆಗೆ ಮಂಡಿಸಿರುವ ಸೂಚನಾ ಪತ್ರಕ್ಕೆ ಉತ್ತರ:

* * * * * * * *

**ವಿಷಯ:** ಉನ್ನತ ಶಿಕ್ಷಣ ಇಲಾಖೆಯಲ್ಲಿ ಹಲವಾರು ಸಮಸ್ಯೆಗಳು ಸೃಷ್ಟಿಯಾಗಿದ್ದು ಈ ಕೆಳಗೆ ತಿಳಿಸಿರುವ ಪ್ರಮುಖ ಸಮಸ್ಯೆಗಳಾದ 1) 2018ರ ಯು.ಜಿ.ಸಿ ನಿಯಮಾವಳಿ ಪ್ರಕಾರ ಕಾಲೇಜು ಅಧ್ಯಾಪಕರುಗಳಿಗೆ ಪ್ರಸ್ತಾವನೆ ಸಲ್ಲಿಸಿದ ಆರು ತಿಂಗಳ ಒಳಗಾಗಿ ಸ್ಥಾನೀಕರಣ ನೀಡದೇ ಇರುವ ವಿಷಯ. 2) ಉನ್ನತ ಶಿಕ್ಷಣ ಇಲಾಖೆಯಡಿ ಸ್ಥಾಪನೆಗೊಂಡು ಯಾವುದೇ ಸವಲತ್ತುಗಳಿಲ್ಲದೇ ಸೊರಗಿರುವ 08 ಸರ್ಕಾರಿ ವಿಶ್ವವಿದ್ಯಾಲಯಗಳು ಮತ್ತು ಮಹಾರಾಣಿ ಕ್ಲಸ್ಟರ್ ಹಾಗೂ ನೃಪತುಂಗ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸ್ಥಿತಿಗತಿಗಳು ಶೋಚನೀಯವಾಗಿರುವ ವಿಷಯ. 3) ರಾಜ್ಯದಲ್ಲಿ ವಿಶೇಷವಾಗಿ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮಾದಕ ವ್ಯಸನಕ್ಕೆ ಬಲಿಯಾಗುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನಲೆಯಲ್ಲಿ ಇಲಾಖೆಯಿಂದ ಯಾವುದೇ ರೀತಿಯ ಸುಧಾರಣಾ ಕ್ರಮಗಳನ್ನು ಕೈಗೊಳ್ಳದಿರುವ ವಿಷಯ. 4) ವಿಶ್ವವಿದ್ಯಾಲಯಗಳು ಮತ್ತು ಪದವಿ ಕಾಲೇಜುಗಳಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಾತಿಯಾಗದೇ ಶೈಕ್ಷಣಿಕ ಗುಣಮಟ್ಟ ಹಿನ್ನಲೆ ಕುಂಠಿತವಾಗಿರುವ ವಿಷಯ. 5) ಪದವಿ ಕಾಲೇಜುಗಳಲ್ಲಿನ ಕೆಲವು ಅಧ್ಯಾಪಕರುಗಳು 20ಕ್ಕೂ ಹೆಚ್ಚು ವರ್ಷಗಳಿಂದ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕೇಂದ್ರ ಕಛೇರಿಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಆಯಾ ಕಾಲೇಜುಗಳಲ್ಲಿ ಶೈಕ್ಷಣಿಕ ಕುಂಠಿತವಾಗಿರುವ ವಿಷಯ. 6) ಉನ್ನತ ಶಿಕ್ಷಣ ಇಲಾಖೆಯ ವಿವಿಧ ಕಛೇರಿಗಳಲ್ಲಿ ಅಧಿಕಾರಿಗಳು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿರುವ ಕುರಿತು ಬರುತ್ತಿರುವ ದೂರುಗಳ ವಿಷಯ ಕುರಿತು. 7) ಅಧ್ಯಾಪಕರು ಮತ್ತು ಅಧ್ಯಾಪಕೇತರರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಯಾವುದೇ ನಿರ್ಣಗಳನ್ನು ತೆಗೆದುಕೊಳ್ಳದೇ ವಿಳಂಬ ನೀತಿ ಅನುಸರಿಸುತ್ತಿರುವ ಕಾರಣದಿಂದಾಗಿ ಪ್ರತಿಯೊಂದು ಸವಲತ್ತುಗಳನ್ನು ನ್ಯಾಯಾಲಯಗಳ ಮೂಲಕವೇ ಪಡೆದುಕೊಳ್ಳುತ್ತಿರುವ ವಿಚಾರ. 8) ಬೆಂಗಳೂರಿಗೆ ವಿದೇಶಿ ವಿಶ್ವವಿದ್ಯಾಲಯಗಳನ್ನು ಆಹ್ವಾನಿಸಿ ನಮ್ಮ ನಾಡಿನ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಅಸ್ತಿತ್ವಕ್ಕೆ ತೊಂದರೆಯಾಗುತ್ತಿರುವ ವಿಷಯಗಳಿಂದಾಗಿ ಉನ್ನತ ಶಿಕ್ಷಣದ ಕಾರ್ಯದಕ್ಷತೆಯು ತೀವ್ರವಾಗಿ ಕುಸಿಯುತ್ತಿದ್ದು ಈ ಎಲ್ಲಾ ವಿಷಯಗಳ ಬಗ್ಗೆ.

**ಉತ್ತರ:**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| 1) | 2018ರ ಯು.ಜಿ.ಸಿ. ನಿಯಮಾವಳಿ ಪ್ರಕಾರ ಕಾಲೇಜು ಅಧ್ಯಾಪಕರುಗಳಿಗೆ ಪ್ರಸ್ತಾವನೆ ಸಲ್ಲಿಸಿದ ಆರು ತಿಂಗಳ ಒಳಗಾಗಿ ಸ್ಥಾನೀಕರಣ ನೀಡದೇ ಇರುವ ವಿಷಯ. | ಯುಜಿಸಿ ವೇತನ ಶ್ರೇಣಿ ಪಡೆಯುತ್ತಿರುವ ಬೋಧಕರುಗಳಿಗೆ ಯುಜಿಸಿಯು ಕಾಲಕಾಲಕ್ಕೆ ವೃತ್ತಿ ಪದೋನ್ನತ್ತಿ ಯೋಜನೆಯಡಿಯಲ್ಲಿ ಮಂಜೂರು ಮಾಡಲಾಗುವ ಸ್ಥಾನೀಕರಣಗಳ ಕುರಿತು ಮಾರ್ಗಸೂಚಿಗಳನ್ನು ಹೊರಡಿಸುತ್ತಿದೆ. ಅದರಂತೆ ಶೈಕ್ಷಣಿಕ ಹಂತ 10 ರಿಂದ 11 (06 ವರ್ಷ),11 ರಿಂದ 12 (05 ವರ್ಷ), 12 ರಿಂದ 13A (03 ವರ್ಷ) ಮತ್ತು 13A ರಿಂದ 14 ರ (03 ವರ್ಷ) |

| | | |
|---|---|---|
| | | ಸ್ಥಾನೀಕರಣಕ್ಕೆ ನಿಯಮಾನುಸಾರ ಪರಿಶೀಲಿಸಿ ಉನ್ನತ ಶೈಕ್ಷಣಿಕ ಹಂತಗಳಿಗೆ ಸ್ಥಾನೀಕರಣ ಸೌಲಭ್ಯವನ್ನು ಮಂಜೂರು ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.<br><br>ಬೋಧಕರುಗಳಿಗೆ ಸ್ಥಾನೀಕರಣಗಳನ್ನು ಮಂಜೂರು ಮಾಡುವ ಸಂಬಂಧ ಆಯಾ ಕಾಲೇಜಿನ ಹಂತದಲ್ಲಿ ರಚಿಸಲಾಗಿರುವ Screening cum Evaluation ಸಮಿತಿಗೆ ಬೋದಕರುಗಳು ನೀಡುವ ಶೈಕ್ಷಣಿಕ ಹಂತ 11 ಮತ್ತು 12ಕ್ಕೆ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಸದರಿ ಸಮಿತಿಯ ಶಿಫಾರಸ್ಸಿನೊಂದಿಗೆ ಸಲ್ಲಿಸುವ ಪ್ರಸ್ತಾವನೆಗಳನ್ನು ಹಾಗೂ ಶೈಕ್ಷಣಿಕ ಹಂತ 13A ಮತ್ತು 14ಕ್ಕೆ ಸಂಬಂಧಿದಂತೆಯೂ ಸಹ ಆಯಾ ಕಾಲೇಜಿನ ಹಂತದಲ್ಲಿ ರಚಿಸಿರುವ ಸಮಿತಿಯ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿರುತ್ತಾರೆ.<br><br>ಶೈಕ್ಷಣಿಕ ಹಂತ 11, 12, 13ಎ ಮತ್ತು 14 ಕ್ಕೆ ಸಂಬಂಧಿಸಿದಂತೆ ಕಾಲೇಜಿನ ಹಂತದ ಸಮಿತಿಯಿಂದ ಸ್ವೀಕೃತವಾದ ಪೂರಕ ದಾಖಲೆಗಳ ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತದೆ. ಸದರಿ ಪ್ರಸ್ತಾವನೆಗಳನ್ನು ಪರಿಶೀಲಿಸಿದ ನಂತರ ಗಮನಿಸಲಾಗುವ ನ್ಯೂನ್ಯತೆಗಳ ಕುರಿತು ದಾಖಲಾತಿಗಳನ್ನು ಕಾಲೇಜುಗಳಿಂದ ಪಡೆಯಲಾಗುತ್ತದೆ. ಸದರಿ ದಾಖಲೆಗಳು ಸ್ವೀಕೃತವಾದ ನಂತರ ಮತ್ತೊಮ್ಮೆ ಪರಿಶೀಲಿಸಿ ಯುಜಿಸಿ ನಿಯಮಾವಳಿಗಳನ್ವಯ ಶೈಕ್ಷಣಿಕ ಹಂತ 11 ರ ಸ್ಥಾನೀಕರಣಕ್ಕೆ ಪಿಹೆಚ್‌ಡಿ/ಎಂ.ಫಿಲ್ ಪದವಿ ಪಡೆದ ಪ್ರಯುಕ್ತ ಸೇವಾ ವಿನಾಯಿತಿ ಕೋರಿರುವ ಪ್ರಕರಣಗಳಲ್ಲಿ 06 ವರ್ಷಕ್ಕೆ ಬದಲಾಗಿ ಕ್ರಮವಾಗಿ 04 ಮತ್ತು 05 ವರ್ಷಕ್ಕೆ ಸ್ಥಾನೀಕರಣ ಮಂಜೂರಾತಿ ಸಂಬಂಧ ಪಿಹೆಚ್‌ಡಿ/ಎಂ.ಫಿಲ್ ಪದವಿಯ ನೈಜತೆ ಪ್ರಮಾಣ ಪತ್ರ ಸ್ವೀಕೃತವಾದ ನಂತರ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಹಂತದಲ್ಲಿ ರಚಿಸಲಾಗಿರುವ ಪರಿಶೀಲನಾ ಸಮಿತಿ/ಆಯ್ಕೆ ಸಮಿತಿ ಪರಿಶೀಲಿಸಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಶೈಕ್ಷಣಿಕ ಹಂತ11 ಮತ್ತು 12ರ ಸ್ಥಾನೀಕರಣವನ್ನು ಮಂಜೂರು ಮಾಡಲಾಗುತ್ತಿದೆ. ಶೈಕ್ಷಣಿಕ ಹಂತ 13ಎ ಮತ್ತು 14 ಕ್ಕೆ ಸಂಬಂಧಿಸಿದಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರ ಹಂತದಲ್ಲಿ |

| | | |
|---|---|---|
| | | ರಚಿಸಲಾಗಿರುವ ವಿಷಯ ತಜ್ಞರು ಹಾಗೂ ವಿಶ್ವವಿದ್ಯಾಲಯದ ಪ್ರತಿನಿಧಿಗಳನ್ನೊಳಗೊಂಡ ಆಯ್ಕೆ ಸಮಿತಿಯ ಮುಂದೆ ಹಾಜರಾಗುವ ಅರ್ಹರಾದ ಬೋಧಕರ ಪೂರಕ ದಾಖಲೆಗಳನ್ನು ಹಾಗೂ ಪಿಹೆಚ್‌ಡಿ ಪದವಿಯ ನೈಜತೆಯನ್ನು ಪಡೆಯಲು ರಾಜ್ಯವ್ಯಾಪ್ತಿ ಮತ್ತು ಹೊರ ರಾಜ್ಯ ವಿಶ್ವವಿದ್ಯಾಲಯದೊಂದಿಗೆ ಪತ್ರ ವ್ಯವಹರಿಸಿ ನೈಜತೆ ಸ್ವೀಕೃತಗೊಂಡ ನಂತರ ನಿಯಮಾನುಸಾರ ಪರಿಶೀಲಿಸಿ ಮುಂದಿನ ಶೈಕ್ಷಣಿಕ ಹಂತಕ್ಕೆ ಮಾಡಲಾಗುವ ಶಿಫಾರಸ್ಸಿನಂತೆ ಅರ್ಹ ಬೋಧಕರ ಪ್ರಸ್ತಾವನೆಗಳನ್ನು ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ.<br><br>ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪೂರಕ ದಾಖಲೆಗಳೊಂದಿಗೆ ಸಮರ್ಪಕವಾಗಿ ಸ್ವೀಕೃತವಾಗುವ ಪ್ರಸ್ತಾವನೆಗಳ ಪ್ರಕರಣಗಳಲ್ಲಿ ಹಾಗೂ ಪಿಹೆಚ್‌ಡಿ/ಎಂಫಿಲ್ ನೈಜತೆಯ ಪ್ರಮಾಣ ಪತ್ರಗಳು ವಿಳಂಬವಿಲ್ಲದೆ ಸ್ವೀಕೃತವಾಗುವ ಪ್ರಕರಣಗಳಲ್ಲಿ ಆರು ತಿಂಗಳ ಒಳಗಾಗಿ ಸ್ಥಾನೀಕರಣ ಮಂಜೂರು ಮಾಡಲಾಗುತ್ತಿದೆ. ಸಮರ್ಪಕ ಮಾಹಿತಿ/ದಾಖಲೆಗಳು ಇಲ್ಲದೇ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಅಪೇಕ್ಷಿತ ಮಾಹಿತಿ/ದಾಖಲೆಗಳು ವಿಳಂಬವಾಗಿ ಸ್ವೀಕೃತವಾಗುವ ಮತ್ತು ಪಿಹೆಚ್‌ಡಿ/ಎಂಫಿಲ್ ನೈಜತೆಯ ಪ್ರಮಾಣ ಪತ್ರಗಳು ವಿಳಂಬವಾಗಿ ಸ್ವೀಕೃತವಾಗುವ ಪ್ರಕರಣಗಳಲ್ಲಿ ಸ್ಥಾನೀಕರಣ ಮಂಜೂರಾತಿಯು ವಿಳಂಬವಾಗುತ್ತಿದೆ. |
| 2) | ಉನ್ನತ ಶಿಕ್ಷಣ ಇಲಾಖೆಯಡಿ ಸ್ಥಾಪನೆಗೊಂಡು ಯಾವುದೇ ಸವಲತ್ತುಗಳಿಲ್ಲದೇ ಸೊರಗಿರುವ 08 ಸರ್ಕಾರಿ ವಿಶ್ವವಿದ್ಯಾಲಯಗಳು ಮತ್ತು ಮಹಾರಾಣಿ ಕ್ಲಸ್ಟರ್ ಹಾಗೂ ನೃಪತುಂಗ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸ್ಥಿತಿಗತಿಗಳು ಶೋಚನೀಯವಾಗಿರುವ ವಿಷಯ. | ಉನ್ನತ ಶಿಕ್ಷಣ ಇಲಾಖೆಯಡಿ ಸ್ಥಾಪನೆಗೊಂಡು ಯಾವುದೇ ಸವಲತ್ತುಗಳಿಲ್ಲದೇ ಸೊರಗಿರುವ 08 ಸರ್ಕಾರಿ ವಿಶ್ವವಿದ್ಯಾಲಯಗಳು ಮತ್ತು ಮಹಾರಾಣಿ ಕ್ಲಸ್ಟರ್ ಹಾಗೂ ನೃಪತುಂಗ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸ್ಥಿತಿಗತಿಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ರಾಜ್ಯದ ಎಲ್ಲಾ ಸಾರ್ವಜನಿಕ ವಿದ್ಯಾಲಯಗಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಪರಾಮರ್ಶಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವಂತೆ ಸರ್ಕಾರದಿಂದ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯತೆಯಲ್ಲಿ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿದೆ. |

| | | |
|---|---|---|
| | | ಸದರಿ ಸಮಿತಿಯು ದಿನಾಂಕ:13.02.2025 ಮತ್ತು 09.05.2025 ರಂದು ಸಭೆಗಳನ್ನು ನಡೆಸಿದ್ದು, ಪ್ರಸ್ತುತ ಇಲ್ಲಿಯವರೆಗೆ ಶಿಫಾರಸ್ಸುಗಳನ್ನು ನೀಡಿರುವುದಿಲ್ಲ. ಸದರಿ ಸಮಿತಿಯು ನೀಡುವ ಶಿಫಾರಸ್ಸುಗಳನ್ನು ಪರಿಶೀಲಿಸಿ, ಸಚಿವ ಸಂಪುಟದ ಮುಂದೆ ಮಂಡಿಸಿ, ವಿಶ್ವವಿದ್ಯಾನಿಲಯಗಳು ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಸದೃಢಗೊಳ್ಳಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ. |
| 3) | ರಾಜ್ಯದಲ್ಲಿ ವಿಶೇಷವಾಗಿ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮಾದಕ ವ್ಯವಸಕ್ಕೆ ಬಲಿಯಾಗುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಇಲಾಖೆಯಿಂದ ಯಾವುದೇ ರೀತಿಯ ಸುಧಾರಣಾ ಕ್ರಮಗಳನ್ನು ಕೈಗೊಳ್ಳದಿರುವ ವಿಷಯ. | ರಾಜ್ಯದಲ್ಲಿ ವಿಶೇಷವಾಗಿ ಸರ್ಕಾರಿ ಮತ್ತು ಖಾಸಗಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮಾದಕ ವ್ಯಸನಕ್ಕೆ ಬಲಿಯಾಗುತ್ತಿರುವ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆಯಲ್ಲಿ ಕೈಗೊಂಡಿರುವ ಕ್ರಮಗಳ ಕುರಿತಾದ ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| 4) | ವಿಶ್ವವಿದ್ಯಾಲಯಗಳು ಮತ್ತು ಪದವಿ ಕಾಲೇಜುಗಳಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳು ನೇಮಕಾತಿಯಾಗದೇ ಶೈಕ್ಷಣಿಕ ಗುಣಮಟ್ಟ ಹಿನ್ನೆಲೆ ಕುಂಠಿತವಾಗಿರುವ ವಿಷಯ. | ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ಬೋಧಕರ ಹುದ್ದೆಗಳಿಗೆ ಎದುರಾಗಿ ಅತಿಥಿ ಉಪನ್ಯಾಸಕರುಗಳನ್ನು ಹಾಗೂ ಬೋಧಕೇತರ ಹುದ್ದೆಗಳಿಗೆ ಎದುರಾಗಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ವಿಶ್ವವಿದ್ಯಾಲಯಗಳು ಕ್ರಮ ಕೈಗೊಂಡಿರುವುದರಿಂದ ಶೈಕ್ಷಣಿಕ ಗುಣಮಟ್ಟ ಕುಂಠಿತವಾಗಿರುವುದಿಲ್ಲ.<br><br>ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 310 ಖಾಯಂ ಪ್ರಾಂಶುಪಾಲರ (ಯು.ಜಿ) ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದ್ದು, ನಿಯಮಾನುಸಾರ ಅರ್ಹತೆ ಪಡೆದ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.<br><br>ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಪ್ರಾಂಶುಪಾಲರ ವಿಶೇಷ ನಿಯಮಗಳನ್ವಯ ನೇಮಕಾತಿ ಪೂರ್ವ ತರಬೇತಿ ಕಾರ್ಯಕ್ರಮ ಚಾಲ್ತಿಯಲ್ಲಿರುತ್ತದೆ ಹಾಗೂ ಅಭ್ಯರ್ಥಿಗಳ ದಾಖಲೆಗಳ ಕುರಿತು ಸಕ್ಷಮ |

| | | |
|---|---|---|
| | | ಪ್ರಾಧಿಕಾರಗಳಿಂದ ನೈಜತೆ ವರದಿಗಳನ್ನು ಪಡೆಯಲು ಕ್ರಮವಹಿಸಲಾಗಿರುತ್ತದೆ. ಅದರಂತೆ, ಸಕ್ಷಮ ಪ್ರಾಧಿಕಾರಗಳಿಂದ ದಾಖಲೆಗಳ ನೈಜತೆ ವರದಿ ಸ್ವೀಕೃತಗೊಂಡ ನಂತರ ಹಾಗೂ ತರಬೇತಿ ಕಾರ್ಯಕ್ರಮದ ಮುಕ್ತಾಯದ ನಂತರ ನೇಮಕಾತಿ ಆದೇಶ ನೀಡಲು ಕ್ರಮವಹಿಸಲಾಗುತ್ತದೆ.<br><br>ಕಾಲೇಜು ಶಿಕ್ಷಣ ಇಲಾಖೆಯಲ್ಲಿ 2021 ರಲ್ಲಿ ಕೈಗೊಳ್ಳಲಾದ ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ನವೆಂಬರ್ 2024 ರಿಂದ ಇಲ್ಲಿಯವರೆಗೆ ಒಟ್ಟು 1132 ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ನೇಮಕಾತಿ ಆದೇಶ ಹೊರಡಿಸಲಾಗಿದೆ.<br><br>2025-26ನೇ ಸಾಲಿನ ಆಯವ್ಯಯ ಭಾಷಣದ ಘೋಷಣೆಯಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳು ಹಾಗೂ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಬೋಧಕ ವೃಂದದ ಒಟ್ಟು 2000 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಆದೇಶಿಸಲಾಗಿದ್ದು, ಆ ಪೈಕಿ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ 826 ವಿವಿಧ ವಿಷಯಗಳ ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ವಿಶೇಷ ನೇಮಕಾತಿ ನಿಯಮಗಳನ್ನು ರೂಪಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br><br>ಮುಂದುವರೆದು, ಬೋಧಕರ ಕೊರತೆಯಿಂದ ಲಭ್ಯವಾಗುವ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದ್ದು, ಆ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ/ಪಾಠ-ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ.<br><br>ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾಗಿ, ಖಾಲಿ ಇರುವ ಬೋಧಕೇತರ ಹುದ್ದೆಗಳಲ್ಲಿ ಇಲಾಖೆಯ ವೃಂದ ಮತ್ತು ನೇಮಕಾತಿ |

| | | |
|---|---|---|
| | | ನಿಯಮಗಳನ್ವಯ ನೇರ ನೇಮಕಾತಿಗೆ ಮೀಸಲಾಗಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುತ್ತಿದೆ. ಮುಂದುವರೆದು, ಮುಂಬಡ್ತಿಗೆ ಮೀಸಲಿರಿಸಲಾದ ಹುದ್ದೆಗಳನ್ನು ಕಾಲ ಕಾಲಕ್ಕೆ ಅರ್ಹ ಪೋಷಕ ವೃಂದದಿಂದ ಬಡ್ತಿ ಮೂಲಕ ತುಂಬಲು ಕ್ರಮ ವಹಿಸಲಾಗುತ್ತಿದೆ.<br><br>ಅಲ್ಲದೆ, 102 ಡಾಟಾ ಎಂಟ್ರಿ ಆಪರೇಟರ್ ಹಾಗೂ 1347 ಗ್ರೂಪ್-ಡಿ ವೃಂದದ ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಸೇವೆಯನ್ನು ಬಳಸಿಕೊಳ್ಳಲು ಕ್ರಮವಹಿಸಲಾಗಿದೆ. |
| 5) | ಪದವಿ ಕಾಲೇಜುಗಳಲ್ಲಿ ಕೆಲವು ಅಧ್ಯಾಪಕರುಗಳು 20 ಕ್ಕೂ ಹೆಚ್ಚು ವರ್ಷಗಳಿಂದ ಕಾಲೇಜು ಶಿಕ್ಷಣ ಇಲಾಖೆ ಆಯುಕ್ತರ ಕೇಂದ್ರಕಛೇರಿಯಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ಆಯಾ ಕಾಲೇಜುಗಳಲ್ಲಿ ಶೈಕ್ಷಣಿಕ ಕುಂಠಿತವಾಗಿರುವ ವಿಷಯ | ಪದವಿ ಕಾಲೇಜುಗಳಲ್ಲಿ 20 ಕ್ಕೂ ಹೆಚ್ಚು ವರ್ಷಗಳಿಂದ ಯಾವುದೇ ಬೋಧಕರು ಆಯುಕ್ತರ ಕಛೇರಿಯಲ್ಲಿ ನಿಯೋಜನೆ ಮೇರೆಗೆ ಕರ್ತವ್ಯನಿರ್ವಹಿಸುತ್ತಿರುವುದಿಲ್ಲ. ಪ್ರಸ್ತುತ ಅನ್ಯ ಕರ್ತವ್ಯದ ಮೇರೆಗೆ ಕೆಲವು ಬೋಧಕರು ಕಾರ್ಯನಿರ್ವಹಿಸುತ್ತಿದ್ದು, ಸದರಿ ಬೋಧಕರು ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಕ್ರಿಯಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ಹಾಗೂ ಶೈಕ್ಷಣಿಕ ಕಾರ್ಯಗಳಿಗೆ ಸಂಬಂಧಿಸಿದಂತೆ ಶೈಕ್ಷಣಿಕ ಕ್ಯಾಲೆಂಡರ್ ಹಾಗೂ ಇತರೆ ಕಾರ್ಯಗಳಾದ Apprenticeship Embedded Degree Program (AEDP), ಕಲಿಕೆ ಜೊತೆ ಕೌಶಲ್ಯ, ಚಿವೆನಿಂಗ್ ಕರ್ನಾಟಕ ಸ್ನಾತಕೋತ್ತರ ವಿದ್ಯಾರ್ಥಿವೇತನ, FKCCI INNO – ಮಂಥನ್-2026, Mentor Together, ಅಜೀಮ್ ಪ್ರೇಮ್‌ಜೀ ಫೌಂಡೇಷನ್ ಹಾಗೂ ಇತರೆ ಕಾರ್ಯಗಳನ್ನು ನಿರ್ವಹಿಸಲು ತಾಂತ್ರಿಕ ಕೌಶಲ್ಯವುಳ್ಳ ಬೋಧಕರು ಅವಶ್ಯವಿರುವುದರಿಂದ ತಾತ್ಕಾಲಿಕವಾಗಿ ಅನ್ಯ ಕಾರ್ಯನಿಮಿತ್ತ ನಿಯೋಜಿಸಲಾಗಿರುತ್ತದೆ.<br><br>ಮುಂದುವರೆದು, ಬೋಧಕರ ಕೊರತೆಯಿಂದ ಲಭ್ಯವಾಗುವ ಕಾರ್ಯಭಾರಕ್ಕೆ ಅತಿಥಿ ಉಪನ್ಯಾಸಕರ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದ್ದು, ಆ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ/ಪಾಠ-ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ. |

| | | |
|---|---|---|
| 6) | ಉನ್ನತ ಶಿಕ್ಷಣ ಇಲಾಖೆಯ ವಿವಿಧ ಕಛೇರಿಗಳಲ್ಲಿ ಅಧಿಕಾರಿಗಳು ವ್ಯಾಪಕ ಭ್ರಷ್ಟಚಾರದಲ್ಲಿ ತೊಡಗಿರುವ ಕುರಿತು ಬರುತ್ತಿರುವ ದೂರುಗಳ ವಿಷಯ ಕುರಿತು. | ಇಲಾಖೆಯಲ್ಲಿ ಸ್ವೀಕೃತವಾದ ವಿವಿಧ ದೂರುಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957ರಂತೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ. |
| 7) | ಅಧ್ಯಾಪಕರು ಮತ್ತು ಅಧ್ಯಾಪಕೇತರರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಹಂತದಲ್ಲಿ ಯಾವುದೇ ನಿರ್ಣಗಳನ್ನು ತೆಗೆದುಕೊಳ್ಳದೇ ವಿಳಂಬ ನೀತಿ ಅನುಸರಿಸುತ್ತಿರುವ ಕಾರಣದಿಂದಾಗಿ ಪ್ರತಿಯೊಂದು ಸವಲತ್ತುಗಳನ್ನು ನ್ಯಾಯಾಲಯಗಳ ಮೂಲಕವೇ ಪಡೆದುಕೊಳ್ಳುತ್ತಿರುವ ವಿಚಾರ. | ಅಧ್ಯಾಪಕರು ಮತ್ತು ಅಧ್ಯಾಪಕೇತರರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ವಯ ಮತ್ತು ಚಾಲ್ತಿಯಲ್ಲಿರುವ ನೀತಿ/ನಿಯಮಗಳನ್ವಯ ಪರಿಶೀಲಿಸಿ ಕ್ರಮವಹಿಸಲಾಗುತ್ತಿದೆ. |
| 8) | ಬೆಂಗಳೂರಿಗೆ ವಿದೇಶಿ ವಿಶ್ವವಿದ್ಯಾಲಯಗಳನ್ನು ಆಹ್ವಾನಿಸಿ ನಮ್ಮ ನಾಡಿನ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಅಸ್ತಿತ್ವಕ್ಕೆ ತೊಂದರೆಯಾಗುತ್ತಿರುವ ವಿಷಯಗಳಿಂದಾಗಿ ಉನ್ನತ ಶಿಕ್ಷಣದ ಕಾರ್ಯದಕ್ಷತೆಯು ತೀವ್ರವಾಗಿ ಕುಸಿಯುತ್ತಿದ್ದು, ಈ ಎಲ್ಲ ವಿಷಯಗಳ ಬಗ್ಗೆ ನಿಯಮ 72ರಡಿಯಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ. | ಕರ್ನಾಟಕ ರಾಜ್ಯದಲ್ಲಿ ಆಸ್ಟ್ರೇಲಿಯಾದಿಂದ ನ್ಯೂ ಸೌಥ್ ವೇಲ್ಸ್ ವಿಶ್ವವಿದ್ಯಾಲಯ ಮತ್ತು ಲಿವರ್ ಪೂಲ್ ವಿಶ್ವವಿದ್ಯಾಲಯ, ಯು.ಕೆ. ಇವುಗಳು ಬೆಂಗಳೂರಿನಲ್ಲಿ 2026-27ನೇ ಸಾಲಿನಿಂದ ಕಾರ್ಯಾರಂಭ ಮಾಡಲಿದ್ದು, ಲ್ಯಾಂಕಸ್ಟರ್ ವಿಶ್ವವಿದ್ಯಾಲಯವು 2027-28ನೇ ಸಾಲಿನಿಂದ ಕಾರ್ಯಾರಂಭ ಮಾಡುತ್ತದೆ. ಈ ವಿದೇಶಿ ವಿಶ್ವವಿದ್ಯಾಲಯಗಳು ಇನ್ನು ಕಾರ್ಯಾರಂಭ ಮಾಡದೇ ಇರುವುದರಿಂದ ಇವುಗಳ ಸ್ಥಾಪನೆಯಿಂದ ರಾಜ್ಯದ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಮೇಲೆ ಉಂಟಾಗುವ ಪರಿಣಾಮದ ಬಗ್ಗೆ ಈಗಲೇ ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ. |

**ಸಂಖ್ಯೆ: ಇಡಿ 108 ಡಿಸಿಇ 2026(ಇ)**

(ಡಾ. ಎಂ.ಸಿ. ಸುಧಾಕರ್)

ಉನ್ನತ ಶಿಕ್ಷಣ ಸಚಿವರು